# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಪಿ.ಸಿ.ಕುಮಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕ್ಯಾತನಹಳ್ಳಿ ಗ್ರಾಮ ಪಂಚಾಯತಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿರಿಸಿ- ಸೇವೆಯಿಂದ ಅಮಾನತ್ತು ಪಡಿಸುವ ಬಗ್ಗೆ

ಓದಲಾಗಿದೆ: 1) ಕರ್ನಾಟಕ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ಆದೇಶ ಸಂಖ್ಯೆ: ಹೆಚ್.ಆರ್.ಸಿ.ಆರ್-4/2015(ಎಸ್‌ಬಿ-3) ದಿನಾಂಕ: 08.04:2015
2) ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ ಮಂಡ್ಯ, ಇವರ ಆದೇಶ ದಿನಾಂಕ: 20.08.2015
3) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯತಿ ಮಂಡ್ಯ ಇವರ ಪತ್ರಸಂಖ್ಯೆ: ಉಕಾ2/ಪಶಾ?ಸಿ1/ಸಿಅರ್-99/2012-13 ದಿನಾಂಕ: 17-08-2015.

ಪ್ರಸ್ತಾವನೆ:

ಶ್ರೀ ಗುರುಮೂರ್ತಿ ಬಿನ್ ಶ್ರೀ ಅಂಕೇಗೌಡ, ಕ್ಯಾತನಹಳ್ಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ನೀರಿನ ಸಂಪರ್ಕ ಪಡೆಯುವ ಸಂಬಂಧ ಕ್ಯಾತನಹಳ್ಳಿ ಗ್ರಾ.ಪಂ.ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಇವರಿಗೆ ಕೋರಿಕೆ ಸಲ್ಲಿಸಿದ್ದು, ನಂತರ ಕುಡಿಯುವ ನೀರು ಸಂಪರ್ಕ ಕಲ್ಪಿಸದೆ ವಿಳಂಬಿಸಿದ ಕಾರಣ ಸದರಿ ಉದಾಸೀನತೆ ವಿರುದ್ಧ ಅವರು ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ., ಪಾಂಡವಪುರ ಮತ್ತು ಮು.ಕಾ.ನಿ.ಅ. ಜಿ.ಪಂ. ಮಂಡ್ಯ ಇವರುಗಳನ್ನು ಸಂಪರ್ಕಿಸಿರುತ್ತಾರೆ. ಈ ಪ್ರಯತ್ನಗಳಿಂದ ಅವರು ಯಶ ಕಾಣದ ಹಿನ್ನಲೆಯಲ್ಲಿ ಮಾನವ ಹಕ್ಕುಗಳ ಆಯೋಗ ಮತ್ತು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಮಂಡ್ಯ ಇಲ್ಲಿಯೂ ಸಹ ಮನವಿಗಳನ್ನು ಸಲ್ಲಿಸಿರುವುದು ಕಂಡುಬರುತ್ತದೆ.

ಮಾನವ ಹಕ್ಕುಗಳ ಆಯೋಗವು ಶ್ರೀ ಗುರುಮೂರ್ತಿ ಇವರ ಅರ್ಜಿಗೆ ಸಂಬಂಧಿಸಿದಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ದಿನಾಂಕ: 08.04.2015ರಂದು ನೀಡಿರುವ ಆದೇಶದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳ ಪರಿಶೀಲನೆಯಿಂದ ಕ್ಯಾತನಹಳ್ಳಿ ಗ್ರಾ.ಪಂ.ನ ಪಂ.ಅ.ಅಧಿಕಾರಿ ರವರು ಶ್ರೀ ಗುರುಮೂರ್ತಿ ಇವರಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸಲು ವಿಫಲರಾಗಿರುವುದು ಸ್ಪಷ್ಟವಾಗಿರುವುದರಿಂದ ಸದರಿಯವರು ಸರ್ಕಾರಿ ನೌಕರರಾಗಿ ತಮ್ಮ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದನ್ನು ತಿಳಿಸಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವುದರಿಂದ ಸದರಿಯವರ ವಿರುದ್ಧ ಕಠಿಣ (stern action) ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿರುತ್ತದೆ. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯೂ ಸಹ ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಆದೇಶದಲ್ಲಿ ಸದರಿ ಲೋಪಕ್ಕೆ ಕಾರಣರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾತಿ ಅಧ್ಯಕ್ಷರು, ಇವರುಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ದಿನಾಂಕ: 20.08.2015ರಿಂದಲೇ ಒದಗಿಸಲು ತಪ್ಪಿದಲ್ಲಿ, ಪ್ರತಿ ದಿನ ರೂ.100/-ಗಳಂತೆ ದಂಡವನ್ನು ವಸೂಲು ಮಾಡಿ ಅವರಿಗೆ ದಂಡದ ಮೊತ್ತವನ್ನು ಪಾವತಿಸಲು ಆದೇಶಿಸಿರುತ್ತದೆ.

ಮಾನವ ಹಕ್ಕುಗಳ ಆಯೋಗದ ಆದೇಶದ ನಂತರ ಮಂಡ್ಯ ಜಿ.ಪಂ. ಕಾರ್ಯಾಲಯವು ಶ್ರೀ ಗುರುಮೂರ್ತಿ ಇವರ ಮನೆಗೆ ನೀರಿನ ಸಂಪರ್ಕ ಕಲ್ಪಿಸುವ ಸಂಬಂಧ ಕ್ರಮ ಕೈಗೊಳ್ಳಲು ಪರಿಶೀಲಿಸಿದ್ದು, ಶ್ರೀ ಗುರುಮೂರ್ತಿ ಇವರು ವಾಣಿಜ್ಯ ಉದ್ದೇಶಕ್ಕಾಗಿ ನೀರಿನ ಸಂಪರ್ಕವನ್ನು

ಕೋರಿರುತ್ತಾರೆಂದು ಹಾಗಾಗಿ ಆಯೋಗದ ಆದೇಶದಂತೆ ನೀರಿನ ಸಂಪರ್ಕ ಕಲ್ಪಿಸಲು ಸಾಧ್ಯವಿಲ್ಲವೆಂದು ಪಾಂಡವಪುರ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ರವರು ಈ ಸಂಬಂಧ ವರದಿ ಮಾಡಿದ್ದಾರೆಂದು ಶ್ರೀ ಗುರುಮೂರ್ತಿ ಇವರು ಕೇಳಿರುವ ಸ್ಥಳವು ಗ್ರಾಮದ ಮುಖ್ಯ ರಸ್ತೆಯಾಗಿದ್ದು, ಈ ಕಟ್ಟಡದ ಸುತ್ತಲೂ ಯಾವುದೇ ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಸದರಿಯವರ ಕಟ್ಟಡದ 15 ಮೀಟರ್ ಅಂತರದಲ್ಲಿರುವ ಇರುವ ಸಾರ್ವಜನಿಕ ನಲ್ಲಿ ಸಂಪರ್ಕವನ್ನು ಬಳಸಿಕೊಳ್ಳಲು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು, ಸದರಿಯವರಿಗೆ ನೀರಿನ ಸಂಪರ್ಕ ಕಲ್ಪಿಸಲು ಸಾರ್ವಜನಿಕರಿಂದ ಆಕ್ಷೇಪಣೆ ಇರುತ್ತದೆ ಎಂದು; ಆದಾಗ್ಯೂ, ಕಾರ್ಯನಿರ್ವಾಹಕ ಅಧಿಕಾರಿಯವರ ಸಮಕ್ಷಮದಲ್ಲಿ ದಿನಾಂಕ: 30.07.2015ರಂದು ನೀರಿನ ಸಂಪರ್ಕ ಕಲ್ಪಿಸಲು ಮುಂದುವರೆದಿದ್ದು, ಆ ಸಂದರ್ಭದಲ್ಲಿ ಸಾರ್ವಜನಿಕರು / ಗ್ರಾಮಸ್ಥರು ಆಕ್ಷೇಪಣೆ ವ್ಯಕ್ತಪಡಿಸಿ ಆ ರಸ್ತೆಯಲ್ಲಿ 40-50 ಅಂಗಡಿ ಮಳಿಗೆಗಳಿದ್ದು, ತಮಗೂ ಸಹ ನೀರಿನ ಪ್ರತ್ಯೇಕ ಪೈಪ್ ಲೈನ್ ವ್ಯವಸ್ಥೆ ಮಾಡುವಂತೆ ಹಾಗೂ ಕಲುಷಿತ ನೀರು ಸರಾಗವಾಗಿ ಹೋಗಲು ಚರಂಡಿ ವ್ಯವಸ್ಥೆ ಕಲ್ಪಿಸುವವರೆಗೆ ನೀರಿನ ಸಂಪರ್ಕ ಕಲ್ಪಿಸಬಾರದೆಂದು ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಆ ಸಂದರ್ಭದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ನಿಂದನೆ ಮಾಡಿ ಪೈಪ್ ಲೈನ್ ಅನ್ನು ಕಿತ್ತು ಎಸೆದಿರುತ್ತಾರೆಂದು ಪಂ.ಅ.ಅಧಿಕಾರಿಯವರು ವರದಿ ಮಾಡಿರುವುದನ್ನು ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ದಿನಾಂಕ: 17.08.2015ರ ಪತ್ರದಲ್ಲಿ **ಮುಖ್ಯಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾಪಂಚಾಯತಿ ಮಂಡ್ಯ ಇವರು** ಕರ್ನಾಟಕ ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಮಾಡಿರುತ್ತಾರೆ.

ಈ ಎಲ್ಲಾ ವಸ್ತು ಸ್ಥಿತಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದಾಗ, ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಗ್ರಾ.ಪಂ. ಅಧಿಕಾರಿಗಳು ಮತ್ತು ತಾ.ಪಂ. ಅಧಿಕಾರಿಗಳು ಮೇಲ್ನೋಟಕ್ಕೆ ವಿಫಲರಾಗಿರುವುದು ಕಂಡುಬರುತ್ತದೆ. ಕೇವಲ ಒಬ್ಬ ಅರ್ಜಿದಾರರಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ಹಳ್ಳಿಯ ಗ್ರಾಮಸ್ಥರು ಮತ್ತು ಸಾರ್ವಜನಿಕರು ಆಕ್ಷೇಪಣೆ ವ್ಯಕ್ತಪಡಿಸಿ ಅಳವಡಿಸಿದ್ದ ಪೈಪ್ ಲೈನ್ ಅನ್ನು ಕಿತ್ತು ಹಾಕಿರುತ್ತಾರೆಂಬ ಅಂಶವನ್ನು ಒಪ್ಪಲು ಸಾಧ್ಯವಿರುವುದಿಲ್ಲ. ಒಂದು ವೇಳೆ ಇಂತಹ ಸಂದರ್ಭ ಎದುರಾಗಿದ್ದಲ್ಲಿ ಅದನ್ನು ದುರುದ್ದೇಶಪೂರಿತ ಕ್ರಮವೆಂದು ಭಾವಿಸಬೇಕಾಗುತ್ತದೆ. ಕುಡಿಯುವ ನೀರಿನ ಸಂಪರ್ಕದಂತಹ ಮೂಲಭೂತ ಸೌಲಭ್ಯವನ್ನು ಕಲ್ಪಿಸುವುದು ಪ್ರತಿಯೊಂದು ಗ್ರಾ.ಪಂ. ಮತ್ತು ತಾ.ಪಂ.ಗಳ ಆಧ್ಯ ಕರ್ತವ್ಯವಾಗಿರುವುದರಿಂದ ಈ ಕ್ರಮವನ್ನು ಪೂರ್ಣಗೊಳಿಸದೆ ಕ್ಷುಲ್ಲಕ ಕಾರಣಗಳ ನೆಪ ಒಡ್ಡಿ ವರದಿ ಸಲ್ಲಿಸಿರುವುದನ್ನು ಪರಿಗಣಿಸುವುದು ಸೂಕ್ತವಿಲ್ಲ.

ಈ ಪ್ರಕರಣದಲ್ಲಿ ಪ್ರಮುಖವಾಗಿ ಕ್ಯಾತನಹಳ್ಳಿ ಗ್ರಾ.ಪಂ.ನಲ್ಲಿ ಪಂ.ಅ.ಅಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಪಿ.ಸಿ.ಕುಮಾರ್ ಇವರು ಗಂಭೀರ ಸ್ವರೂಪದ ಕರ್ತವ್ಯ ಲೋಪ ಮತ್ತು ಉದಾಸೀನತೆಗಳು ಸ್ಪಷ್ಟವಾಗಿರುತ್ತವೆ. ಮಾನವ ಹಕ್ಕುಗಳ ಆಯೋಗದ ನಿರ್ದೇಶನ, ಜಿಲ್ಲಾ ಗ್ರಾಹಕರ ಪರಿಹಾರ ವೇದಿಕೆ ಇವರುಗಳ ಎಲ್ಲಾ ನಿರ್ದೇಶನಗಳನ್ನು ಪಾಲಿಸದೆ ಕ್ಷುಲ್ಲಕ ಕಾರಣಗಳನ್ನು ಆಧರಿಸಿ ನೀರಿನ ಸಂಪರ್ಕ ಕಲ್ಪಿಸದೇ ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ತೋರದೆ ವಿಫಲರಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)ನ್ನು ಉಲ್ಲಂಘಿಸಿರುತ್ತಾರೆ.

ಆದ್ದರಿಂದ, ಶ್ರೀ ಪಿ.ಸಿ.ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕ್ಯಾತನಹಳ್ಳಿ ಗ್ರಾಮ ಪಂಚಾಯತಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ, ಇವರ ವಿರುದ್ದದ ಲೋಪಗಳ ಬಗೆಗಿನ

ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಸದರಿ ನೌಕರರನ್ನು ಸೇವೆಯಿಂದ ಅಮಾನತ್ತುಪಡಿಸಲು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 229 ವಿಸೇಬಿ 2015 ಬೆಂಗಳೂರು ದಿನಾಂಕ: 30-09-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಗಳು 1957ರ ನಿಯಮ 10(1)(ಡಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಸಿ.ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕ್ಯಾತನಹಳ್ಳಿ ಗ್ರಾಮ ಪಂಚಾಯತಿ ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆ. ಇವರನ್ನು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತು ಪಡಿಸಿದೆ.

ಶ್ರೀ ಪಿ.ಸಿ.ಕುಮಾರ್, ಇವರು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಅಮಾನತ್ತಿನ ಅವಧಿಯಲ್ಲಿ ಈ ನೌಕರರು ನಿಯಮಾನುಸಾರ ಜೀವನಾಧಾರ ಭತ್ಯೆಗೆ ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಹನುಮಂತಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು , ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಮಾನವ ಹಕ್ಕು ಆಯೋಗ, 4ನೇ ಮಹಡಿ 5ನೇ ಹಂತ ಬಹುಮಹಡಿ ಕಟ್ಟಡ, ಬೆಂಗಳೂರು.
3. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆ, ಮಂಡ್ಯ ಜಿಲ್ಲೆ ಮಂಡ್ಯ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾಂಡವಪುರ.
6. ಉಪ ನಿರ್ದೇಶಕರು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮ ಪಂಚಾಯತ್ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
7. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ,
8. ಸಂಬಂಧಿಸಿದ ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ ಇವರ ಮುಖಾಂತರ)
9. ಸರ್ಕಾರದ ಪ್ರಧಾನ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಉಪ ಕಾರ್ಯದರ್ಶಿ (ಆಡಳಿತ), ಗ್ರಾ .ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ